<u>ದಿನಾಂಕ **06.01.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ ಹೆಚ್ ಟಿ ಎನ್ ವಕೀಲರಿಂದಃ</u>

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ತಾಯಿಯ ಅನಾರೋಗ್ಯದ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸತ್ಯಾಂಶ ಹೊರ ಬರುತ್ತದೆ ಎಂದು ನನ್ನ ತಾಯಿಯನ್ನು ಸಾಕ್ಷಿಯಾಗಿ ಮಾಡಿಸಿಲ್ಲ ಎಂದರೆ ಸುಳ್ಳು. ನನಗೆ ದಾವಾ ಆಸ್ತಿ ಬಗ್ಗೆ ಗೊತ್ತು. ದಾವಾ ಆಸ್ತಿ ಒಂದೇ ಇದೆ. ಪ್ರತಿವಾದಿಗೆ ಲೀಗಲ್ ನೋಟೀಸ್ ಕೊಟ್ಟ ಬಗ್ಗೆ ಗೊತ್ತಿದೆ. ನಿಪಿ-8 ರ ಲೀಗಲ್ ನೋಟೀಸ್ ನಲ್ಲಿ ನನ್ನ ತಾಯಿಯ ಸಹಿ ಇಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರು ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ನಿಪಿ-8 ರಲ್ಲಿ ನನ್ನ ತಾಯಿ ಸಹಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸುಳ್ಳು. ಲೀಗಲ್ ನೋಟೀಸ್ ಬಗ್ಗೆ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸುಳ್ಳು ನಿಪಿ-3 ರ ಕ್ರಯ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ. ನಿಪಿ-5 ರ ಕ್ರಯ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ಮಾತುಕತೆ 21,25,000/-ಕ್ಕೆ ಆಗಿರುತ್ತದೆ. ಪೂರ್ತಿ ಹಣ ಅಂದರೆ 21,25,000/- ನನಗೆ ಬಂದಿರುತ್ತದೆ ಎಂದರೆ ಸುಳ್ಳು. ನಿಪಿ-5 ರ ಕ್ರಯ ಪತ್ರದಲ್ಲಿ ಹೇಳಿರುವ ಚೆಕ್ ಹಣ 5,00,000/- ನನ್ನ ಖಾತೆಗೆ ಬಂದಿರುತ್ತದೆ. ಪ್ರತಿವಾದಿ ಹಣದ ಭದ್ರತೆಗೆ ಒಂದು ಚೆಕ್ ನೀಡಿದ್ದರು ಎಂದರೆ ಸುಳ್ಳು. ಕ್ರಯ ಪತ್ರ ಆದ ದಿನ ಚೆಕ್ಕುಗಳನ್ನು ಪ್ರತಿವಾದಿ ನಮ್ಮನ್ನು ಕೇಳಿದರು ಎಂದರೆ ಸುಳ್ಳು. ನಿಪಿ-2 ರ ಚೆಕ್ ದಿನಾಂಕ 03.06.2019 ಎಂದು ಬರೆದಿದ್ದಾರೆಂದರೆ ನಿಜ. ಪೂರ್ತಿ ಹಣ ಬಂದಿದ್ದರೂ ಸುಳ್ಳು ದಾವಾ ಹಾಕಿರುತ್ತೇನೆಂದರೆ ಸುಳ್ಳು. ಕ್ರಯ ಪತ್ರ ಆದ 2-3 ವರ್ಷಗಳ ನಂತರ ದಾವಾ ಹಾಕಿರುತ್ತೇಂದರೆ ನಿಜ. ದಾವಾಗೆ ಕಾಲಮಿತಿ ಇಲ್ಲ ಎಂದರೆ ಸುಳ್ಳು. ದಾವಾಗೆ ವ್ಯಾಜ್ಯ ಕಾರಣ ಇಲ್ಲ ಎಂದರೆ ಸುಳ್ಳು. ಪ್ರತಿವಾದಿ ಚೆಕ್ಕುಗಳನ್ನು ನನ್ನ ತಾಯಿಯನ್ನು ಕೇಳಿದರೂ ಹಿಂದಿರುಗಿಸಿಲ್ಲ ಎಂದರೆ ಸುಳ್ಳು. 1 ನೇ ಪ್ರತಿವಾದಿಯವರ ಹೆಸರಿಗೆ ಖಾತಾ ಆದ ನಂತರ ಅವರ ಅವಶ್ಯಕತೆಗಾಗಿ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ

ಸಾಕ್ಷಿಯು ಅದಕ್ಕೆ ನಾವು ದಾವಾ ಹಾಕಿರುತ್ತೇವೆಂದು ನುಡಿಯುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ದಾವಾ ಹಾಕಿರುತ್ತೇನೆಂದರೆ ಸುಳ್ಳು.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.